ಆ) ಸಮಯಕ್ಕೆ ನೀರು ಸಿಗದೆ ಇರುವುದರಿಂದ ಮೇವು ಬೆಳೆಯದೆ ಹಾನಿಗೊಳಗಾದ ರೈತರ ಸಾಲ ಮನ್ನಾ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು). —

ಅ) ನಿಜ.

ಆ) ಧಾರವಾಡ ಜಿಲ್ಲಾಧಿಕಾರಿಗಳಿಂದ ವರದಿ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ತುಂಡು ಭೂಮಿ ಕಾಯಿದೆ

೬೩೩. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಕಂದಾಯ ಮಂತ್ರಿ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಡು ಭೂಮಿ ಕಾಯಿದೆ ಜಾರಿಯಲ್ಲಿದೆಯೇ ? ಹಾಗೂ ಇದು ರಾಜ್ಯದ ಯಾವ ಯಾವ ಜಿಲ್ಲೆಗೆ ಅನ್ವಯಿಸುತ್ತದೆ ?

ಆ) ಈ ಕಾಯಿದೆಯು ಚಿಕ್ಕಮಗಳೂರು ಜಿಲ್ಲೆಗೆ ಅನ್ವಯಿಸದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು). —

ಅ) ೧೯೬೬ರ ಕರ್ನಾಟಕ ತುಂಡು ಭೂಮಿ ನಿಷೇಧ ಹಾಗೂ ಹಿಡುವಳಿಗಳ ಸಂಯೋಜನೆ ಕಾಯಿದೆಯು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ್ಯಂತ ಜಾರಿಯಲ್ಲಿರುತ್ತದೆ.

ಆ) ಉಪ ಪ್ರಶ್ನೆ (ಅ)ಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸಂವುದಿಲ್ಲ.

ಜನತಾ ಕಾಟನ್ ಸೊಸೈಟಿ

೬೩೪. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರಿಯೂರು ತಾಲ್ಲೂಕಿನಲ್ಲಿ ಯಾವ ಸಾಲಿನಲ್ಲಿ ''ಜನತಾ ಕಾಟನ್ ಸೊಸೈಟಿ'' ಯನ್ನು ಪ್ರಾರಂಭಿಸಲಾಯಿತು. ಇದರಲ್ಲಿ ಎಷ್ಟು ರೈತರು ಷೇರು ಬಂಡವಾಳಕ್ಕೆ ಹಣ ತೊಡಗಿಸಿರುತ್ತಾರೆ ಹಾಗೂ ಅದರ ಪೊತ್ತವೆಷ್ಟು ?

ಆ) ಈಗಿನ ಪಾಲಿ ಸಹಕಾರಿ ಮಂತ್ರಿಗಳು ಇದರ ಅಧ್ಯಕ್ಷರಾಗಿ ಎಷ್ಟು ವರ್ಷಗಳು ಸೇವೆ ಸಲ್ಲಿಸಿದರು ?

ಇ) ಈ ಸಂಘವು ಎತ್ತುವಳಿಯಾಗಲು ಬಂದೊದಗಿದ ದುಸ್ಥಿತಿಗೆ ಇವರೇ ಕಾರಣವೇನು ? ಹಾಗೂ ಇದಕ್ಕೆ ಕಾರಣರಾರು ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು). —

ಅ) ಹಿರಿಯೂರು ತಾಲ್ಲೂಕಿನಲ್ಲಿ ಹಿರಿಯೂರು ತಾಲ್ಲೂಕು ಜನತಾ ಪತ್ತಿ ಬೆಳೆಗಾರರ ಸಹಕಾರ ಸಂಘ ನಿಯಮಿತವು ೧೯೭೩–೭೪ನೇ ಸಾಲಿನಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು ಚಿತ್ರದುರ್ಗ ಸಂಖ್ಯೆ ಡಿಆರ್‌ಸಿ–ಆರ್‌ಇಜಿಎನ್–೮೧–೭೩–೭೪ರಲ್ಲಿ ದಿನಾಂಕ ೨೭–೯–೧೯೭೩ ರಂದು ನೋಂದಣಿ ಆಗಿರುತ್ತದೆ.

ಇದರಲ್ಲಿ ೪೫೬ ರೈತ ಸದಸ್ಯರು ''ಎ'' ತರಗತಿಯ ಸದಸ್ಯತ್ವ ಪಡೆದು ೪೬,೬೦೦–೦೦ ರೂ.ಗಳ ಪೊತ್ತದ ಷೇರು ಬಂಡವಾಳವನ್ನು ತೊಡಗಿಸಿರುತ್ತಾರೆ.